# ಮಿರ್ಚಿ ಬಜ್ಜಿ, ಚಿಕನ್ ಕಬಾಬ್ ಚಪ್ಪರಿಸುವ ಮಯೊ ಝುವಾಂಗ್



ಮಯೊ ಝುವಾಂಗ್ ಚಿತ್ರ: ಬಿ.ಎಚ್. ಶಿವಕುಮಾರ್

ಹಲವು ಮಹತ್ತರ ಚಿಂತನೆಗಳನ್ನು ಒಳಗೊಂಡ ಬುದ್ಧಿಸಮ್‌ನ ಮೂಲ ಭಾರತದಲ್ಲೇ ಆದರೂ ಈ ಚಿಂತನೆಗಳು ಚೀನಾ, ಮ್ಯಾನ್ಮಾರ್, ಜಪಾನ್, ಟಿಬೆಟ್, ಆಗ್ನೇಯ ಏಷ್ಯಾದ ಕೆಲವು ಭಾಗಗಳಿಗೂ ವಿಸ್ತರಿಸಿದೆ. ಅಷ್ಟೇ ಅಲ್ಲ ಜಗತ್ತಿನಾದ್ಯಂತ ಲಕ್ಷಾಂತರ ಮಂದಿ ಬುದ್ಧಿಸಮ್ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿ ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ. ಬುದ್ಧಿಸಮ್ ಬಗ್ಗೆ ವಿಶೇಷ ಒಲವು ಬೆಳೆಸಿಕೊಂಡ ವಿದೇಶೀಯರಲ್ಲಿ ಮ್ಯಾನ್ಮಾರ್‌ನ ಮಯೊ ಝುವಾಂಗ್ ಒಬ್ಬರು.

ಶೆಫ್ ಮಯೊ ಝುವಾಂಗ್ ಮ್ಯಾನ್ಮಾರ್ ನಿಂದ ಬಂದವರು. ದೂರದ ಊರಿನಿಂದ ಬೆಂಗಳೂರಿಗೆ ಬರುವಾಗ ಅನೇಕರಿಗೆ ಮನಸ್ಸಿನಲ್ಲಿ ನಾನಾ ರೀತಿಯ ಗೊಂದಲಗಳಿರುತ್ತವೆ. ಆದರೆ ಮಯೊ ಯಾವುದೇ ಒತ್ತಡ, ಯೋಚನೆ, ಚಿಂತೆ ಮುಂತಾದ ಮಾನಸಿಕ ತುಮುಲಗಳಿಗೊಳಗಾಗದೇ ಮುಕ್ತ ಮನಸ್ಸಿನಿಂದ ಬೆಂಗಳೂರಿಗೆ ಒಂದು ವರ್ಷ ಹಿಂದೆಯೇ ಬಂದು ನೆಲೆ ನಿಂತವರು.

ರೆಸ್ಟೋರೆಂಟ್‌ನಲ್ಲಿ ಚೀಫ್ ಶೆಫ್ ಆಗಿರುವ ಮಯೊ ಬುದ್ಧಿಸಮ್‌ನಿಂದ ಪ್ರಭಾವಿತವಾಗಿರುವ ರಾಷ್ಟ್ರದಿಂದ ಬಂದವರು. ಬುದ್ಧನ ಚಿಂತನೆಗಳನ್ನು ಬಹುವಾಗಿ ಪ್ರೀತಿಸುವ ಮಯೊ ಅವರಿಗೆ ಕಿರಿಯರು ಹಿರಿಯರಿಗೆ ಗೌರವ ಕೊಡಬೇಕು, ಅವರ ಆದೇಶಗಳನ್ನು ಪಾಲನೆ ಮಾಡಬೇಕು ಮುಂತಾದ ಸದಾಚಾರಗಳನ್ನು ಮಕ್ಕಳಲ್ಲಿ ಬೆಳೆಸಬೇಕು ಎಂಬ ಕಳಕಳಿಯಿದೆ. ಜತೆಗೆ ಕುಟುಂಬ ಎಂದರೆ ತಂದೆ ತಾಯಿ, ಅಜ್ಜ, ಅಜ್ಜಿ, ಮಾವ ಚಿಕ್ಕಪ್ಪ... ಹೀಗೆ ಎಲ್ಲರೂ ಒಂದೇ ಸೂರಿನಡಿ ನೆಲೆಸಬೇಕು. ಕೂಡು ಕುಟುಂಬ ಪದ್ಧತಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ ಎಂಬುದು ಇವರ ವಾದ.

'ಭಾರತದಲ್ಲಿ ಕುಟುಂಬ ವ್ಯವಸ್ಥೆ ಚೆನ್ನಾಗಿದೆ. ಸೌಹಾರ್ದಯುತ ಭಾವನೆ ಮನೆ ಮಂದಿಯಲ್ಲಿದೆ. ಇಂಥ ಸೌಹಾರ್ದ ಮನೋಭಾವ, ಸ್ನೇಹಮಯ ವಾತಾವರಣ, ಹಿರಿಯರನ್ನು ಗೌರವಿಸುವ ಪದ್ಧತಿ ಬೇರೆ ಯಾವ ದೇಶದಲ್ಲೂ ಕಂಡುಬರುವುದಿಲ್ಲ. ಇಲ್ಲಿ ವಿವಿಧ ಧರ್ಮೀಯರು ಇದ್ದರೂ ಎಲ್ಲರೂ ಒಂದೇ ಎಂಬ ಭಾವನೆಯೇ ಇದೆ. ಇದು ನಿಜಕ್ಕೂ ಶ್ಲಾಘನೀಯ' ಎನ್ನುತ್ತಾರೆ ಈ ಶೆಫ್.

'ಭಾರತದಲ್ಲಿ ಆಹಾರ ವ್ಯವಸ್ಥೆ ಚೆನ್ನಾಗಿದೆ. ವಿಶ್ವದ ಯಾವುದೇ ದೇಶಗಳಿಂದ ಭಾರತಕ್ಕೆ, ಬೆಂಗಳೂರಿಗೆ ಬಂದರೂ ತಿಂಡಿ ತಿನಿಸು ಮಟ್ಟಿಗೆ ಯಾವುದೇ ತೊಂದರೆ ಅನುಭವಿಸಲಾರರು. ರೋಟಿ, ದೋಸೆ, ಚಪಾತಿ, ಪೂರಿ ಮಕ್ಕಳಾದಿಯಾಗಿ ಎಲ್ಲರೂ ಇಷ್ಟಪಟ್ಟು ತಿನ್ನುವ ತಿಂಡಿಗಳೇ. ಇದರೊಂದಿಗೆ ಬಳಸುವ ಸಬ್ಜಿಗಳಲ್ಲಿ ನೂರಾರು ವೈವಿಧ್ಯಗಳಿವೆ. ಮಾಂಸಾಹಾರಿಗಳಿಗೂ ಇದು 'ಆಹಾರ ಸ್ವರ್ಗ' ಎನ್ನಬಹುದು. ಅಷ್ಟೊಂದು ವಿಭಿನ್ನ, ವೈವಿಧ್ಯಮಯ ತಿಂಡಿ ತಿನಿಸು ಇಲ್ಲಿ ಸಿಗುತ್ತದೆ. ಮಸಾಲೆ ದೋಸೆ ಅಂತೂ ನನಗೆ ಪಂಚಪ್ರಾಣ. ಚಿಕನ್ ಕಬಾಬ್, ಬಿರಿಯಾನಿ, ಮಿರ್ಚಿ ಬಜ್ಜಿ ಬಾಯಲ್ಲಿ ನೀರೂರಿಸುತ್ತವೆ. ಇಂಥ ವೆರೈಟಿ ತಿನಿಸು ಸವಿಯಬೇಕಾದರೆ ಭಾರತಕ್ಕೇ ಬರಬೇಕು ಎಂಬುದನ್ನು ನಾನು ನನ್ನ ಅನೇಕ ವಿದೇಶಿ ಸ್ನೇಹಿತರಿಗೆ ಹೇಳಿದ್ದುಂಟು' ಎಂದು ಹೇಳುತ್ತಾರೆ ಮಯೊ.

'ಹೋಟೆಲ್‌ನಲ್ಲಿ ಬೇರೆ ಬೇರೆ ಡಿಶ್‌ಗಳನ್ನು ಮಾಡುವಾಗ ಆದಷ್ಟು ಹೆಚ್ಚು ರುಚಿಕರ ವೆರೈಟಿ ಇರುವ ಹಾಗೆ ನೋಡಿಕೊಳ್ಳುತ್ತೇನೆ. ಒಂದು ದಿನದ ಊಟ ತಿಂಡಿಯನ್ನು ಮತ್ತೊಂದು ದಿನ ಪುನರಾವರ್ತನೆ ಮಾಡಲ್ಲ. ಹೀಗಾಗಿ ಗ್ರಾಹಕರಿಗೂ ಅಡುಗೆ ಇಷ್ಟವಾಗುತ್ತದೆ. ಹೊಟ್ಟೆತುಂಬ ತಿಂದು ಹೋಗಿರುವ ಗ್ರಾಹಕರು ಮತ್ತೆ ಇದೇ ಹೋಟೆಲ್ ಅನ್ನು ಹುಡುಕಿಕೊಂಡು ಬರುತ್ತಾರೆ. ಹೋಟೆಲ್ ಉದ್ಯಮಕ್ಕೆ ಇಲ್ಲಿ ವಿಫುಲ ಅವಕಾಶಗಳಿವೆ' ಎಂಬುದು ಮಯೊ ಅಭಿಪ್ರಾಯ.

ಬೆಂಗಳೂರಿನ ಹವಾಮಾನ ಚೆನ್ನಾಗಿದೆ. ಯಾವ ಊರಿಗೆ ಹೋದರೂ, ದೇಶಗಳಿಗೆ ಹೋದರೂ ಬೆಂಗಳೂರಿನಂಥ ಆಹ್ಲಾದಕರ ವಾತಾವರಣ ಸಿಗಲಿಕ್ಕಿಲ್ಲ. ಇದನ್ನು 'ಬಹುತೇಕ ಎಲ್ಲ ವಿದೇಶೀಯರೂ ಹೇಳುತ್ತಾರೆ. ಇಲ್ಲಿ ಬಂದು ನೆಲೆ ನಿಲ್ಲಲು ಇಷ್ಟಪಡುತ್ತಾರೆ. ಬೇರೆ ಬೇರೆ ದೇಶಗಳ ಜನ ಬಂದು ಉದ್ಯಮವನ್ನೋ, ಉದ್ಯೋಗವನ್ನೋ ಮಾಡುತ್ತಾರೆ, ವಿದ್ಯಾರ್ಥಿಗಳು ಶಿಕ್ಷಣ ಅರಸಿ ಬರುತ್ತಾರೆ. ಈ ದೇಶದ ಬಗ್ಗೆ ಅಭಿಮಾನವನ್ನೂ ವ್ಯಕ್ತಪಡಿಸುತ್ತಾರೆ' ಎನ್ನುತ್ತಾರೆ ಹಲವು ದೇಶಗಳನ್ನು ಸುತ್ತಿ ಬಂದು ಅನೇಕ ದೇಶಗಳ ನೀರು, ಊಟ ತಿಂಡಿ ತಿಂದು ಬಂದು ಅನುಭವವಿರುವ ಶೆಫ್ ಮಯೊ.

ಬೆಂಗಳೂರು ಟ್ರಾಫಿಕ್ ಅಂದರೆ ಅದು ಬಹಳ ಕಿರಿಕಿರಿ ವಿಷಯ. ದಿನೇ ದಿನೇ ಈ ಸಮಸ್ಯೆ ಉಲ್ಬಣವಾಗುತ್ತದೆಯೇ ಹೊರತು ಕಡಿಮೆ ಆಗುತ್ತಿಲ್ಲ. ಮೆಟ್ರೊ ರೈಲು, ಫ್ಲೈಓವರ್‌ಗಳು ಇದ್ದರೂ ರಸ್ತೆ ಮಾತ್ರ ಯಾವ ಹೊತ್ತಿನಲ್ಲೂ ಖಾಲಿ ಇರುವುದೇ ಇಲ್ಲ. ಜನದಟ್ಟಣೆ, ಸಂಚಾರದಟ್ಟಣೆ ಈ ನಗರದ ಬಹುದೊಡ್ಡ ಮೈನಸ್ ಪಾಯಿಂಟ್ ಎಂಬುದನ್ನು ಮಯೊ ಗುರುತಿಸಿದ್ದಾರೆ.

ಬಿಡುವಿನ ದಿನಗಳಲ್ಲಿ ಸಿನಿಮಾ ನೋಡುವುದು, ಮಾಲ್‌ಗಳನ್ನು ಸುತ್ತುವುದು, ಪ್ರವಾಸಿ ತಾಣಗಳಿಗೆ ಹೋಗುವುದು ಮುಂತಾದ ಕೆಲಸಗಳಿಗೆ ಮೀಸಲಿಡುವ ಈ ಶೆಫ್‌ಗೆ ವಾರಾಂತ್ಯದಲ್ಲಿ ಬಿಡುವಿಲ್ಲದ ಕೆಲಸವಂತೆ. ಶನಿವಾರ ಭಾನುವಾರಗಳಂದು ಹೋಟೆಲ್‌ಗೆ ಬರುವ ಗ್ರಾಹಕರ ಸಂಖ್ಯೆ ಹೆಚ್ಚಿರುತ್ತದೆ. ಹೀಗಾಗಿ ಊಟ ತಿಂಡಿಗಳಲ್ಲಿ ವಿಶೇಷ ಕಾಳಜಿ ಮತ್ತು ವಿಭಿನ್ನತೆ ಮೆರೆಯಬೇಕಾಗುತ್ತದೆ ಎನ್ನುವ ಮಯೊ, ಬೆಂಗಳೂರಿನ ಬ್ರಿಗೇಡ್ ರಸ್ತೆ, ಮಹಾತ್ಮಾ ಗಾಂಧಿ ರಸ್ತೆಗಳಲ್ಲಿ ವಾಕಿಂಗ್ ಮಾಡುವುದು ಎಂದರೆ ಬಹಳ ಇಷ್ಟವಂತೆ.

★ ಅವನೀಶ್